Golden Research Thoughts
ISSN 2231-5063
Impact Factor : 3.4052(UIF)
Volume - 5 | Issue - 1 | July – 2015

# ಡಾ.ಶಿವಶರಣಪ್ಪ, ಪಿ.ಎಚ್ ಕೋಡ್ಲಿಯವರ ಕವನಗಳಲ್ಲಿ ಶೋಷಣೆ

ಶಿವಗಂಗಾ U. ಬಿಲಗುಂದಿ

ಡಾ.ಶಿವಶರಣಪ್ಪ ಪಿ.ಎಚ್. ಕೋಡ್ಲಿಯವರು ಒಬ್ಬ ಸೃಜನ ಶೀಲ ಬರಹಗಾರರಾಗಿ ಅಧ್ಯಯನ, ಅಧ್ಯಾಪನಗಳ ಜೊತೆಗೆ ಸೃಜನ, ವಿಮರ್ಶೆ, ಸಂಶೋಧನೆ, ಸಂಪಾದನೆ ಮುಂತಾದ ಸಾಹಿತ್ಯ ಕ್ಷೇತ್ರಕ್ಕೆ ಕೊಡುಗೆಯನ್ನು ಕೊಟ್ಟಿದ್ದಾರೆ. ಇವರ ಕವನಗಳಲ್ಲಿ ಶೋಷಣೆಯನ್ನು ಕುರಿತು ರಚಿಸಿದ್ದಾರೆ.

“ಜಾತಿ ಮಾಡಿತು ಹೃದಯಕೆ ಘಾತಿ
ಜಾತಿ ಜಾತಿಗಳ ಮಧ್ಯೆ ತಿಕ್ಕಾಟ
ನಾ ಶ್ರೇಷ್ಠ ಜಾತಿ, ನೀ ಶ್ರೇಷ್ಠ ಜಾತಿ ಎನ್ನುವ ಹುಚ್ಚು,
ಹಿಡಿಸಿತು ಪಕ್ಷ ಪಕ್ಷಗಳ ಮಧ್ಯ ಜಾತೀಯ
ಬೀಜವ ಬಿತ್ತಿ ಆಯ್ಕೆಯಾಗುವರು, ಪುಂಡ ಪುರುಷರು
ಇದ್ದುಇಲ್ಲದ, ಆಶ್ವಾಸನೆಯ ಕೊಟು
ಜಾತಿಯೆಂಬ ಮಂತ್ರವ ತೊಟ್ಟು
ಮುಗ್ಧ ಜನಗಳ ಮನಸ್ಸಿನಲ್ಲಿ ಮುಳ್ಳಿಟ್ಟು
ದಲಿತ ಪಕ್ಷ, ಬ್ರಾಹ್ಮಣ ಪಕ್ಷ ಸಾವಿರಾರು
ಪಕ್ಷಕಟ್ಟಿ ತಾವುಮುಂದೆ ಬಂದು
ಎಲ್ಲರಿಗೂ ಹಿಂದೆ ತಳ್ಳುವ ಜನರೆ ಹೆಚ್ಚು
ಜಾತಿ ಹೊಗಲಾಡಿಸಲು ಪಣ ತೊಟ್ಟು
ಸರ್ಕಾರವೆ ಜಾತಿಪ್ರಮಾಣ ಪತ್ರ ಕೇಳುವಾಗ
ಈ ಜಾತಿಗೆ ಇಷ್ಟು ಸೀಟು ಎಂದುಮಾಡುವ
ಸರ್ಕಾರವೆ ಎಂದಾದರುಜಾತಿ ಹೋಗಲಾಡಿಸ ಬಹುದೇ”[೧]

ಜಾತಿಯಿಂದ ಹೃದಯಕ್ಕೆನೋವು, ಜಾತಿ–ಜಾತಿಗಳ ಮಧ್ಯೆ ಜಗಳ, ಮೇಲು–ಕೀಳು ಎನ್ನುವ ಹುಚ್ಚು, ಹೀಗೆ ಪಕ್ಷ ಪಕ್ಷಗಳಮಧ್ಯೆ ಜಾತಿಯ ಬೀಜವ ಬಿತ್ತಿ ಆಯ್ಕೆಯಾಗಿ ಅಧಿಕಾರವನ್ನು ಪಡೆಯುವರು. ಪುಂಡ ಪುರುಷರು ಯಾವುದೇ ಕೆಲಸವಿಲ್ಲದವರು. ಅಧಿಕಾರಿಗಳು ಆಶ್ವಾಸನೆಯಕೊಟ್ಟು ಜಾತಿಯ ಮಂತ್ರವನ್ನು ತೊಟ್ಟು, ಮುಗ್ಧವಾಗಿರುವ ಮನಸ್ಸಿಗೆ ಜಾತಿಯ ಬಗ್ಗೆ ಮುಳ್ಳಿನ ಭಾವನೆಯ್ನುಕಟ್ಟಬಾರದು. ಈ ಜಾತಿಯ ಭಾವನೆಯಿಂದ ಎಲ್ಲರಿಗೂ ಹಿಂದೆ ತಳ್ಳುವ ಜನರು ಹೆಚ್ಚಿದ್ದಾರೆ. ಜಾತಿಯನ್ನು ಹೋಗಲಾಡಿಸಿದರು. ಸರ್ಕಾರವೇ ಜಾತಿ ಪ್ರಮಾಣ ಪತ್ರವನ್ನು ಕೇಳುತ್ತಿರುವಾಗ, ಈ ಜಾತಿಗೆ ಎಷ್ಟು ಎಂದು ಸೀಮಿತ ಸೀಟು ಮಾಡುವರು. ಸರ್ಕಾರ ಎಂದಾದರು ಜಾತಿ ಹೋಗಲಾಡಿಸಬಹುದೇ? ಜಾತಿಯತೆಯು ಹೋಗಲಾಡಿಸಲೂ ಎಲ್ಲರೂ ಮುಂದಾಗಬೇಕು ಆಗ ಮಾತ್ರ ಶೋಷಣೆಯಿಂದ ಹೋರಬರುವುದು ಸಾಧ್ಯವಾಗುವುದು ಎಂದ ಕವಿಯು ವ್ಯಕ್ತಪಡಿಸಿದ್ದಾರೆ.

“ಶೋಷಣೆ ನಡೆಯುತ್ತಿದೆ ಸ್ತ್ರೀಯರದು
ರಾಮಾಯಣದ ಶ್ರೀ ರಾಮನೇ ಬಿಟ್ಟಿಲ್ಲ
ದಿನಾ ಬಿಟ್ಟುದಿನಾ ಹೆಚ್ಚುತ್ತಿದೆ ಸ್ತ್ರೀ ಶೋಷಣೆ
ವರದಕ್ಷಿಣೆ ಮಾನಭಂಗ, ಶೀಲಹರಣ, ಅತ್ಯಾಚಾರ,
ದಿನೆ ದಿನೆ ತುಂಬಿ ಬರುತ್ತಿವೆ
ಪತ್ರಿಕೆಯಲ್ಲಿ ಸುದ್ದಿ”[೨]

ಶೋಷಣೆಗೆ ಸ್ತ್ರೀಯರ ಮೇಲೆ ನಡೆಯುತ್ತಿದೆ. ರಾಮಾಯಣದ ಶ್ರೀ ರಾಮನ ಕಾಲದಲ್ಲೂ ಬಿಟ್ಟಿಲ್ಲ ಇಂದಿಗೂ ಸ್ತ್ರೀ ಶೋಷಣೆಯಲ್ಲಿ ತೊಡಗಿದ್ದಾಳೆ. ಆಕೆಗೆ ವರದಕ್ಷಿಣೆ, ಮಾನಭಂಗ, ಶೀಲಹರಣ, ಅತ್ಯಾಚಾರವೂ ದಿನೆ ದಿನೆ ಹೆಚ್ಚುತ್ತಿದೆ. ಪತ್ರಿಕೆಯಲ್ಲಿ ದಿನವೂ ಸ್ತ್ರೀಯ ಶೋಷಣೆಯ ವಾರ್ತೆಯು, ಸುದ್ಧಿ ದಿನಾಲೂ ಬರುತ್ತಿವೆ ಎಂಬುವುದು ಕವಿಯು ಈ ಕವನದಲ್ಲಿ ವ್ಯಕ್ತಪಡಿಸಿದ್ದಾರೆ.

“ಯುಗದಿಂದ ಯುಕ್ಕೆ ಹೆಚ್ಚುತ್ತಿದೆ
ಸ್ತ್ರೀ ಶೋಷಣೆ ನಾವು ಮೇಲೆ ನೀವು ಕೆಳಗಿ
ಎನ್ನುವ ಭಾವನೆ ಮರೆತಿಲ್ಲ ಕೆಟ್ಟ ಭಾವನೆಗಳ
ಮಧ್ಯೆ ಸತ್ತವಿಚಾರಗಳ ಮರ್ಧಯೆ ಹೊಡೆದಾಡುವ
ಜನ ಎಂದಾದರು ಮರೆತರೆ ಈ ಸತ್ರೀ ಶೋಷಣೆ”[೩]

ಶತ–ಶತಮಾನಕ್ಕೆ ಸ್ತ್ರೀಯ ಮೇಲೆ ಶೋಷಣೆ ಮಾಡುತ್ತಿದ್ದಾರೆ. ಪುರುಷರು ನಾವು ಮೇಲೆ ನೀವು ಕೆಳಗೆ ಎನ್ನುವ ಭಾವನೆ ಇನ್ನೂ ಬಿಟ್ಟು ಹೀಗೆ ಹಿಂದಿನ ವಿಚಾರಗಳನ್ನು ಇನ್ನು ಜನರು ಮರೆತಿಲ್ಲ. ಇದೆಲ್ಲ ವಿಚಾರವನ್ನು ಬಿಟ್ಟು ನಾವೆಲ್ಲಿ ಸಮಾನರೂ ಎಂಬ ಭಾವನೆಯು ಬರಬೇಕು. ಅಲ್ಲಿಯವರೆಗೆ ಸ್ತ್ರೀಯು ಶೋಷಣೆಯಲ್ಲಿ ಬದುಕುವಳು ಎನ್ನುವ ಭಾವನೆಯ ಕವಿಯು ಈ ಕವನದಲ್ಲಿ ವ್ಯಕ್ತಪಡಿಸಿದ್ದಾರೆ.

ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

"ಪುರಾತನ ಕಾಲದ ವಧುದಕ್ಷಿಣೆ ಹೋಗಿ
ವರದಕ್ಷಿಣೆಯಾಗಿ ಭೂತವಾಗಿ ಕಾಡಬೇಡ
ಹೆಣ್ಣಿಗೆ, ಕ್ಷಯ, ಹೃದಯಘಾತ, ಏಡ್ಸ್ ರೋಗ
ಕ್ಕಿಂತ ಭಯಾನಕ ಈ ವರದಕ್ಷಿಣೆ
ಸ್ತ್ರೀ ಸಮಾಜಕ್ಕೆ ಹಿಡಿದ ಭೂತ, ಹೆಣ್ಣು ಹುಟ್ಟಿದರೆ
ಶಾಪ ಎನ್ನುವ ಭಾವನೆ ತರಿಸುವದೆ ವರದಕ್ಷಿಣೆ"[೪]

ಹಿಂದಿನ ಕಾಲದಿಂದಲೂ ವಧುಕ್ಷಿಣೆ ಹೋಗಿ ವರದಕ್ಷಿಣೆಯಾಗಿ ಬಂತು. ಈ ವರದಕ್ಷಿಣೆಯು ಹೆಣ್ಣು ಹೆತ್ತವರ ಪಾಲಿಗೆ ಭೂತವಾಗಿ ಕಾಡುತ್ತಿದೆ. ಹೆಣ್ಣಿಗೆ, ಕ್ಷಯ, ಹೃದಯಾಘಾತ, ಏಡ್ಸ್ ರೋಗಗಳಂತಹ ಭಯಾತಕ ಈ ವರದಕ್ಷಿಣೆಯ ಪೀಡುಗು ಸ್ತ್ರೀಯರನ್ನು ಶೋಷಣೆಗೆ ಒಳಗಾಗಿದ್ದಾರೆ. ಸ್ತ್ರೀಯು ಸಮಾಜದಲ್ಲಿ ವರಕ್ಷಿಣೆಯ ಎಂಬ ಶಾಪವೂ ಶೋಷಣೆಗೆ ಒಳಗಾಗಿಸಿದೆ. ಎಂಬುವುದನ್ನು ಕವಿಯು ತುಂಬಾ ಸ್ತ್ರೀಯರ ಬಗ್ಗೆ ಕಳಕಳಿಯಿಂದ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ.

"ಪೊಲೀಸಿರಗೆ ಕೈ ಬೆಚ್ಚಗೆ ಮಾಡಿದರೆ ಸಾಕು
ತಾನೆ ಆತ್ಮ ಹತ್ಯೆ ಮಾಡಿ ಕೊಂಡಿದ್ದಾಳೆ,
ಅನೈತಿಕ ಸಂಬಂಧಿತ್ತು, ಸಾವಿರ ಸುಳ್ಳು
ಬರೆದು ಸುದ್ದಿ ಮಾಡಿ, ಸುಮ್ಮನಾಗುವರು
ನೇಣುಹಾಕಿ ಕೊಳ್ಳುವುದು, ಭಾವಿಗೆ ಬಿಳುವುದು
ರೈಲ್ವೆ ಹಳಿಗೆ ತಲೆ ಕೊಡವರು
ಇದಕ್ಕೆ ಕಾರಣಯಾರು,ಪುರಷ ಸಮಾಜ ಸರ್ಕಾರ
ಯಾರು ಕಾರಣ ನೀವೇ ಹೇಳಿ ಯಾರು ಕಾರಣರು?[೫]

ಪೊಲೀಸರಿಗೆ ಲಕ್ಷ ನೀಡಿ ತಾನೆ ಆತ್ಮಹತ್ಯೆ ಮಾಡಿಕೊಂಡಿರುವಳು ಎಂದು ಹೇಳಿಸುವರು. ಇಲ್ಲವಾದರೆ ಆಕೆಗೆ ಅನೈತಿಕ ಸಂಬಂಧ ಇತ್ತು. ಸಾವಿರ ಸುಳ್ಳು ಹೇಳಿ ಸುದ್ದಿಯನ್ನು ಹರಡಿಸುವರು. ಕೆಲವೊಮ್ಮೆ ನೇಣು ಹಾಕಿಕೊಂಡಳು, ಭಾವಿಗೆ ಬೀದ್ದಳು, ರೈಲ್ವೆ ಹಳಿಗೆ ತಲೆಕೊಟ್ಟು ಸಾಯುವಳು. ಇದಕ್ಕೆ ಕಾರಣ ಈ ಪುರುಷ ಪ್ರಧಾನ ಸಮಾಜ ಹಾಗೂ ಸರ್ಕಾರ ಯಾವುದು ಕಾರಣವೆಂದು ಕವಿಯು ತಮ್ಮ ಮನದಾಳ ಮಾತನ್ನು ಬಿಚ್ಚಿಟ್ಟಿದ್ದಾರೆ.

"ಬಡತನದ ಭವಣೆ ಪಟ್ಟವನಿಗೆ ಗೊತ್ತು
ಶ್ರೀಮಂತರಿಗೆ ತಿಳಿಯದು ಇದರ ಗತ್ತು
ಮಧ್ಯಮ ವರ್ಗದವರಿಗೆ ತಿಳಿದಿಲ್ಲ ಇದರ ಗರತಿ ಗಮ್ಮತ್ತು
ದಿನ ದಲಿತರಿಗೆಕಡುಬಡವರಿಗೆ ತಿಳಿದುರವದು ಇದರ ಸ್ವತ್ತು
ಭಾರತದೇಶಕ್ಕೆ ಸಾಲವಿದೆ ಎಂದ ಮೇಲೆ ಎಲ್ಲರಿಗೂ ಸಾವಲವಿದೆ
ಎಂದಹಾಗೆ ಎಲ್ಲರೂ ಬಡವರುತಾನೆ"[೬]

ಬಡತನದ ಬದುಕು ಬಹಳ ಕಷ್ಟಕರವಾಗಿರುವುದು. ಶ್ರೀಮಂತರು ಬಡವರ ಬಗ್ಗೆ ಗೊತ್ತಿರುವುದಿಲ್ಲ. ಮಧ್ಯೆಮ ವರ್ಗದವರಿಗೂ ಬಡವರ ಬಗ್ಗೆ ತಿಳಿದರೂ ಏನು ಮಾಡುವಂತಿಲ್ಲ. ದಿನ–ದಲಿತರು ಕಡು ಬಡತನವನ್ನು ತಿಳಿದವರು. ಭಾರತ ದೇಶಕ್ಕೆ ಸಾಲವಿದೆ ಎಂದ ಪಕ್ಷದಲ್ಲಿ ನಮ್ಮೇಲ್ಲರಿಗೂ ಸಾಲವಿದೆ ಎಂದು ನಾವೆಲ್ಲ ಬಡವರು ಎಂಬುವುದು ತಿಳಿಯಬೇಕು. ಈ ಕವನದಲ್ಲಿ ಕವಿಯು ಬಡತನದ ಬಗ್ಗೆ ದಿನ–ದಲಿತರು, ಅನುಭವಿಸುವ ಕಷ್ಟವನ್ನು ಭಾವಪೂರ್ವಕವಾಗಿ ತಿಳಿಸಿದ್ದಾರೆ.

"ಜೀವನ ನಡೆಸುವ, ಮೂಲಭೂತ ಸೌಕರ್ಯಗಳನ್ನು
ಪೂರೈಸಿಕೊಳ್ಳದವನು 'ಬಡವ' ಬಡತನದಲ್ಲಿ ಜೀವಿಸುವವರು
ಬಡತನ ಬಿಟ್ಟುಹಾಕಿ, ಬಡತನ ಚಿಂತೆ
ಬದಿಗೊತ್ತಿ ನಿಮ್ಮ ಮೇಲಾಗುವ ಅನ್ಯಾಯವಿರುದ್ಧ
ಹೋರಾಡಿ, ಬಂಡೇಳಿ, ಅಂದಾಗ ಸಿಗುವುದುನಿಮಗೆ
ಶಾಂತಿ ಸುಖ ನೆಮ್ಮದಿ ಸರ್ವರಲ್ಲಿ ಸಮಪಾಲು ಸರ್ವರಲ್ಲಿ ಸಮಬಾಳು"[೭]

ಬಡತನವೆಂದರೆ ಎರಡುಹೊತ್ತು ಊಟಕ್ಕೂ ಗತಿ ಇರಲಾದೆ ಇರುವ ವ್ಯಕ್ತಿ ಗಂಜಿ ಮೇಲೆ ಜೀವನ ನಡೆಸುವ. ಮೂಲಭೂತ ಸೌಕರ್ಯಗಳನ್ನು ಪೂರೈಸಿಕೊಳ್ಳದವನು ಬಡವನು. ಬಡತನದಲ್ಲಿ ಬದುಕುವರು ಬಡತನದ ಬಗ್ಗೆ ಚಿಂತೆಯನ್ನು ಬಿಟ್ಟಾಕಿ ಬದುಕಬೇಕು. ಅನ್ಯಾಯ, ಶೋಷಣೆಯ ವಿರುದ್ಧ ಹೋರಾಡಿ, ಬಂಡೇಳಿ ಅಂದಾಗ ಶಾಂತಿ, ಸುಖ, ನೆಮ್ಮದಿ ಸರ್ವರಿಗೂ ಸಮಪಾಲು, ಸಮಬಾಳು ಅಗುವುದು ಎಂದು ಕವಿಯು ಬಡತನದಲ್ಲಿ, ಬಡವರು ಶೋಷಣೆಗೆ ಒಳಗಾಗಿರುವ ಕುರಿತುತಮ್ಮ ವಿಚಾರವನ್ನು ವ್ಯಕ್ತಪಡಿಸಿದ್ದಾರೆ. ಕವಿಯು ತಮ್ಮ ಕವನಗಳಲ್ಲಿ ಸ್ತ್ರೀ ಹಾಗೂ ಬಡವರ ಶೋಷಣೆಯನ್ನು ಎತ್ತಿತೋರಿಸಿದ್ದಾರೆ.

## ಅಡಿಟಿಪ್ಪಣಿ

೧ ಶಿವಶರಣಪ್ಪ ಪಿ.ಎಚ್ ಕೋಡ್ಲಿ : ಮೌನ ಮೆರವಣಿಗೆ. : ಪು – ೭

೨ ಶಿವಶರಣಪ್ಪ ಪಿ.ಎಚ್ ಕೋಡ್ಲಿ : ಮೌನ ಮೆರವಣಿಗೆ. ಪು – ೯

೩ ಶಿವಶರಣಪ್ಪ ಪಿ.ಎಚ್ ಕೋಡ್ಲಿ : ಮೌನ ಮೆರವಣಿಗೆ. ಪು – ೯

೪ ಶಿವಶರಣಪ್ಪ ಪಿ.ಎಚ್ ಕೋಡ್ಲಿ : ಮೌನ ಮೆರವಣಿಗೆ. ಪು – ೧೦

೫ ಶಿವಶರಣಪ್ಪ ಪಿ.ಎಚ್ ಕೋಡ್ಲಿ : ಮೌನ ಮೆರವಣಿಗೆ. ಪು – ೧೦

೬ ಶಿವಶರಣಪ್ಪ ಪಿ.ಎಚ್ ಕೋಡ್ಲಿ : ಮೌನ ಮೆರವಣಿಗೆ. ಪು – ೩೮

೭ ಶಿವಶರಣಪ್ಪ ಪಿ.ಎಚ್ ಕೋಡ್ಲಿ : ಮೌನ ಮೆರವಣಿಗೆ. ಪು – ೩೯